ಚಾಮರಾಜನಗರ ತಾಲ್ಲೂಕು ಪುಟ್ಟನಪುರದಲ್ಲಿ ಸರ್ಕಾರಿ ಕಾಲುದಾರಿಗೆ ಹಾಕಿರುವ ಬೇಲಿಯನ್ನು ತೆರವು ಮಾಡಿಸುವ ಬಗ್ಗೆ

268. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಪುಟ್ಟನಪುರದಲ್ಲಿರುವ ಸರ್ವೆ ನಂ. 6, 7, 8 ಮತ್ತು 9ರಲ್ಲಿರುವ ಕಾಲು ದಾರಿ ಸರ್ಕಾರದ ವಶದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಈ ಮೇಲ್ಕಂಡ ಸರ್ವೆ ನಂಬರುಗಳಲ್ಲಿನ ದಾರಿಗೆ ಖಾಸಗಿ ವ್ಯಕ್ತಿ ಬೇಲಿ ಹಾಕಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಸರ್ಕಾರಿ ಜಾಗಕ್ಕೆ ಖಾಸಗಿಯವರು ಹಾಕಿರುವ ಬೇಲಿಯನ್ನು ತೆರವು ಮಾಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;

ಈ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):–

ಅ) ಹೌದು.

ಆ) ಹೌದು.

ಇ) 5 ಜನರನ್ನು ಖುಲ್ಲಾ ಮಾಡಿದ್ದು ಮತ್ತೊಬ್ಬರಾದ ಶ್ರೀ ಸೈಯದ್ ಮುಕ್ತಾರ್ ಅಹಮದ್‌ರವರನ್ನು ಖುಲ್ಲಾ ಮಾಡಿಸಬೇಕಾಗಿದೆ. ಇವರು ಚಾಮರಾಜನಗರದ ಜುಡಿಷಿಯಲ್ ಮ್ಯಾಜಿಸ್ಟೇಟರವರ ನ್ಯಾಯಾಲಯದಲ್ಲಿ ದಾವಾ ದಾಖಲು ಮಾಡಿದ್ದು, ನ್ಯಾಯಾಲಯ ತಡೆಯಾಜ್ಞೆ ನೀಡಿರುತ್ತೆ.

ಈ) ಉದ್ಭವಿಸುವುದಿಲ್ಲ.

ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ವಯೋಮಿತಿ ಆಧಾರದ ಮೇಲೆ ಸಂದರ್ಶನಕ್ಕೆ ಕರೆಯುವ ಬಗ್ಗೆ

536. ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲ್‌ಪುರ) :– ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ವಯೋಮಿತಿ ಆಧಾರದ ಮೇಲೆ ಸಂದರ್ಶನ ಕರೆಗೆ ಇಲಾಖೆಗಳು ಮೊದಲ ಆದ್ಯತೆ ನೀಡುತ್ತಿಲ್ಲದಿರುವುದರ ಕಾರಣಗಳೇನು, ಹಾಗೂ ಇದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):–

ಅ) ಉದ್ಯೋಗ ವಿನಿಮಯ ಕೇಂದ್ರಗಳಿಗೆ ನಿಯೋಜಕರಿಂದ ಅಧಿಸೂಚಿತವಾದ ಹುದ್ದೆಗಳಿಗೆ ನಿಗಧಿಪಡಿಸಿದ ವಿದ್ಯಾರ್ಹತೆ, ಪಂಗಡ, ವಯೋಮಿತಿ ಇವುಗಳನ್ನು ಹೊಂದಿರುವ ಅಭ್ಯರ್ಥಿಗಳನ್ನು ನೋಂದಣಿ ಜ್ಯೇಷ್ಠತೆ ಆಧಾರದ ಮೇರೆಗೆ ಪುರಸ್ಕರಿಸಲಾಗುತ್ತದೆ.

ಪಲ್ಪ್‌ವುಡ್ ಸಂಸ್ಥೆಗೆ ಗೋಮಾಳ ಭೂಮಿ ಒದಗಿಸುವ ಬಗ್ಗೆ

535. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) :– ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?